# ‘ಏಕಂ’ ಅಂತಿದಾರೆ ರಕ್ಷಿತ್ ಶೆಟ್ಟಿ!

ಹಿಂದಿ ಸೇರಿದಂತೆ ಭಾರತದ ಹಲವು ಭಾಷೆಗಳಲ್ಲಿ ಚಿತ್ರರಂಗದ ಮುಖ್ಯ ನಟರು, ನಿರ್ದೇಶಕರು, ತಂತ್ರಜ್ಞರೆಲ್ಲ ವೆಬ್ ಸೀರಿಸ್ ನಿರ್ಮಾಣದಲ್ಲಿ ತೊಡಗಿಸಿಕೊಂಡಿದ್ದಾರೆ. ಒಟಿಟಿ ವೇದಿಕೆಗೆ ಹೊಸದೊಂದು ಪ್ರೇಕ್ಷಕವರ್ಗವೇ ಸೃಷ್ಟಿಯಾಗಿದ್ದು, ಅವರನ್ನು ಗಮನದಲ್ಲಿರಿಸಿಕೊಂಡು ಅಮೆಜಾನ್ ಪ್ರೈಮ್, ನೆಟ್‌ಫ್ಲಿಕ್ಸ್‌ನಂಥ ಒಟಿಟಿ ವೇದಿಕೆಗಳೂ ವೆಬ್ ಸಿರೀಸ್ ನಿರ್ಮಾಣದಲ್ಲಿ ತೊಡಗಿಕೊಂಡಿವೆ. ಹಾಗೆ ನೋಡಿದರೆ ಕನ್ನಡದಲ್ಲಿ ಇನ್ನೂ ವೆಬ್‌ಸಿರೀಸ್ ಬಗ್ಗೆ ಗಂಭೀರವಾಗಿ ಯೋಚನೆ ಮಾಡುತ್ತಿರುವವರು ಕಡಿಮೆ ಎಂದೇ ಹೇಳಬೇಕು.

ನಿರ್ದೇಶಕ ಬಿ.ಎಂ. ಗಿರಿರಾಜ್ ಒಂದು ಕ್ರೈಂ ಥ್ರಿಲ್ಲರ್ ವೆಬ್ ಸೀರಿಸ್ ನಿರ್ದೇಶಿಸಿದ್ದರು. ನಟ ಶಿವರಾಜ್‌ಕುಮಾರ್ ಕೂಡ ಒಂದು ವೆಬ್ ಸೀರಿಸ್ ನಿರ್ಮಾಣ ಮಾಡಿದ್ದಾರೆ. ಈಗ ಅವರ ಸಾಲಿಗೆ ರಕ್ಷಿತ್ ಶೆಟ್ಟಿ ಸೇರ್ಪಡೆಯಾಗಿದ್ದಾರೆ.

ರಕ್ಷಿತ್ ವೆಬ್ ಸೀರಿಸ್ ನಿರ್ದೇಶನ ಮಾಡುತ್ತಿಲ್ಲ. ಬದಲಿಗೆ ತಮ್ಮ ತಂಡದ ಹೊಸ ಹುಡುಗರನ್ನು ಬಳಸಿಕೊಂಡು ಅದನ್ನು ನಿರ್ಮಿಸುತ್ತಿದ್ದಾರೆ. ನಿರ್ದೇಶನವನ್ನೂ ಬೇರೆಯವರೇ ಮಾಡಲಿದ್ದಾರಂತೆ.

ಲಾಕ್‌ಡೌನ್ ಸಮಯದಲ್ಲಿ ರಕ್ಷಿತ್ ವೆಬ್ ಸೀರಿಸ್‌ಗೆ ಹೊಂದುವಂಥ ಒಂದು ಕಥೆಯನ್ನು ಬರೆದಿಟ್ಟುಕೊಂಡಿದ್ದರು. ಅದಕ್ಕೆ ‘ಏಕಂ’ ಎಂಬ ಹೆಸರನ್ನೂ ಇಡಲಾಗಿದೆ. ಅದನ್ನೇ ಈಗ ನಿರ್ಮಾಣ ಮಾಡುತ್ತಿದ್ದಾರೆ. ಒಟ್ಟು ಎಂಟು ಎಪಿಸೋಡುಗಳಲ್ಲಿ ಈ ಸೀರಿಸ್ ನಿರ್ಮಾಣವಾಗಲಿದ್ದು, ಕರಾವಳಿ ಭಾಗದಲ್ಲಿ ನಡೆಯುವ ಕಥೆಯನ್ನು ಒಳಗೊಂಡಿದೆಯಂತೆ. ಎಂಟು ಎಪಿಸೋಡುಗಳಲ್ಲಿಯೂ ಬೇರೆ ಬೇರೆ ಕಥೆಗಳನ್ನು ಮಾಡುವುದು ರಕ್ಷಿತ್ ಯೋಜನೆ. ಸುಮಂತ್ ಭಟ್ ಎನ್ನುವ ಹೊಸ ಪ್ರತಿಭೆ ಮುಖ್ಯಭೂಮಿಕೆಯಲ್ಲಿ ನಟಿಸಲಿದ್ದು, ‘ಮಾಲ್ಗುಡಿ ಡೇಸ್’ ಮಾದರಿಯಲ್ಲಿ ಒಂದೇ ಪ್ರದೇಶದಲ್ಲಿ ನಡೆಯಲಿರುವ ಬೇರೆ ಬೇರೆ ಕಥೆಗಳನ್ನು ಹೇಳುವ ರೀತಿಯಲ್ಲಿ ಸ್ಕ್ರಿಪ್ಟ್ ಸಿದ್ಧಮಾಡಿಕೊಳ್ಳಲಾಗಿದೆ. ■





**ಮೊದಲ ನೋಟಕ್ಕೆ ಯೋಗರಾಜ ಭಟ್ಟರ ಸಿನಿಮಾಗಳ ಬೇಜವಾಬ್ದಾರಿಯೇ ಮೈವೆತ್ತ ಮುದ್ದು ಹುಡುಗನ ಹಾಗೆ ಕಾಣುವ ದಿಗಂತ್ ಒಳಗೆ ಒಬ್ಬ ಚೈತನ್ಯಶೀಲ ನಟನಿದ್ದಾನೆ. ಟ್ರಾವೆಲ್, ಟ್ರೆಕ್, ಫಿಟ್‌ನೆಸ್, ಗಾರ್ಡನಿಂಗ್, ಹೀಗೆ ಹತ್ತು ಹಲವು ಕವಲುಗಳಲ್ಲಿ ಅವರ ಆಸಕ್ತಿ ಹರಡಿಕೊಂಡಿದೆ. ತಮ್ಮ ಬೇಜವಾಬ್ದಾರಿ, ದೂಧ್ ಪೇಡಾ ಇಮೇಜ್ ಅನ್ನು ಕೊಡವಿಕೊಂಡು ಪ್ರಬುದ್ಧ ಪಾತ್ರಗಳಲ್ಲಿ ನಟಿಸುವ ಹಂಬಲದಲ್ಲಿರುವ ದಿಗಂತ್ ಜೊತೆ ನಡೆಸಿದ ಮಾತುಕತೆ ಇಲ್ಲಿದೆ.**

■ **ಪದ್ಮನಾಭ ಭಟ್**

◆ **ಸದ್ಯ ಯಾವ ಯಾವ ಸಿನಿಮಾಗಳನ್ನು ಮಾಡುತ್ತಿದ್ದೀರಿ?**

ಚಂದ್ರಶೇಖರ್ ನಿರ್ಮಾಣದ ‘ಹುಟ್ಟುಹಬ್ಬದ ಶುಭಾಶಯ’ ಸಿನಿಮಾ ಬಿಡುಗಡೆಗೆ ಸಜ್ಜಾಗಿದೆ. ಯೋಗರಾಜ್ ಭಟ್ ನಿರ್ದೇಶನದ ‘ಗಾಳಿಪಟ 2’ ಸಿನಿಮಾದ ಮೊದಲ ಶೆಡ್ಯೂಲ್ ಶೂಟ್ ಆಗಿದೆ. ಮುಂದಿನ ವರ್ಷ ಜನವರಿಯಿಂದ ಅದರ ಶೂಟಿಂಗ್ ಶುರುವಾಗುತ್ತದೆ. ‘ಮಾರಿಗೋಲ್ಡ್’ ಡಬ್ಬಿಂಗ್ ಹಂತದಲ್ಲಿದೆ. ‘ಕ್ಷಮಿಸಿ ನಿಮ್ಮ ಖಾತೆಯಲ್ಲಿ ಹಣವಿಲ್ಲ’ ಸಿನಿಮಾ ಚಿತ್ರೀಕರಣ ನಡೆಯುತ್ತಿದೆ.

ಈ ಎಲ್ಲ ಸಿನಿಮಾಗಳೂ ತುಂಬ ವಿಭಿನ್ನವಾಗಿದೆ. ಮಜವಾಗಿರುವ ಸ್ಕ್ರಿಪ್ಟ್‌ಗಳನ್ನೇ ಆಯ್ದುಕೊಂಡಿದ್ದೀನಿ. ‘ಮಾರಿಗೋಲ್ಡ್’ ಥ್ರಿಲ್ಲರ್ ಜಾನರ್ ಸಿನಿಮಾ. ‘ಗಾಳಿಪಟ 2’ರಲ್ಲಿ ಸಾಕಷ್ಟು ಕಾಮಿಡಿ ಇದೆ. ‘ಹುಟ್ಟುಹಬ್ಬದ ಶುಭಾಶಯ’ ಮರ್ಡರ್ ಮಿಸ್ಟ್ರಿ. ‘ಕ್ಷಮಿಸಿ ನಿಮ್ಮ ಖಾತೆಯಲ್ಲಿ ಹಣವಿಲ್ಲ’ ಒಂದು ಕಿರುಪಟ್ಟಣದಲ್ಲಿ ನಡೆಯುವ ಕಥೆ. ಇದರಲ್ಲಿ ಸಾಕಷ್ಟು ಹಾಸ್ಯವೂ ಇದೆ.

◆ **ತುಂಬಾ ದಿನಗಳ ನಂತರ ಮತ್ತೆ ಯೋಗರಾಜ ಭಟ್ಟರ ಜೊತೆ ಸಿನಿಮಾ ಮಾಡ್ತಿದ್ದೀರಿ. ಹೇಗಿದೆ ಅನುಭವ?**

‘ಗಾಳಿಪಟ’ ದೊಡ್ಡ ಹಿಟ್ ಆಗಿತ್ತು. ‘ಗಾಳಿಪಟ 2’ ಬೇರೆಯವ್ರ ಜೊತೆ ಮಾಡೋದಕ್ಕೆ ಒಂದು ಹೆಜ್ಜೆ ಇಟ್ಟಿದ್ದರು. ಆದರೆ ತುಂಬ ಜನರು ಅವರಿಗೆ ‘ಗಣೇಶ್ ಮತ್ತೆ ದಿಗಂತ್ ಕಾಂಬಿನೇಷನ್ ಇಲ್ದೆ ಈ ಸಿನಿಮಾ ನೋಡೋಕೆ ಇಷ್ಟಪಡಲ್ಲ’ ಎಂದು ಹೇಳಿದ್ರು. ಆಮೇಲೆ ಭಟ್ಟರು ಮತ್ತೆ ನಮ್ಮನ್ನೇ ಸೇರಿಸಿಕೊಂಡರು. ಮೊದಲ ಶೆಡ್ಯೂಲ್ ಶೂಟ್‌ನಲ್ಲಿ ಪಾಲ್ಗೊಂಡ ಅನುಭವದ ಮೇಲೆಯೇ ಹೇಳುವುದಾದರೆ, ಸಿನಿಮಾ ತುಂಬ ಫನ್ನಿಯಾಗಿ ಬಂದಿದೆ. ಭಟ್ಟರ ಹಿಂದಿನ ಎರಡು ಮೂರು ಸಿನಿಮಾಗಳು ಅಷ್ಟಾಗಿ ಹಿಟ್ ಆಗಿರಲಿಲ್ಲ. ಅವರಿಗೆ ಒಂದು ಹಿಟ್ ಸಿನಿಮಾ ಕೊಡಬೇಕು ಎಂಬ